(ಆ) ಹಾಗಿದ್ದಲ್ಲಿ, ಯೋಜನೆಗಳ ಹೆಸರುಗಳೇನು ಹಾಗೂ ಪ್ರತಿಯೊಂದು ಯಾತ ನೀರಾವರಿಯಿಂದ ನೀರಾವರಿಯಾಗುತ್ತಿರುವ ಪ್ರದೇಶದ ವಿಸ್ತೀರ್ಣವೆಷ್ಟು ;

(ಇ) ಮುಳಿವಾಡ ಏತ ನೀರಾವರಿ ಯೋಜನೆ ಬಿಜಾಪುರ, ಬಾಗೇವಾಡಿ ಹಾಗೂ ಸಿಂದ್ಗಿ ತಾಲ್ಲೂಕುಗಳ ಪ್ರದೇಶಗಳಿಗೆ ಪ್ರಯೋಜನಕಾರಿಯಾಗುವುದೆ ಹಾಗೂ ಹುನಗುಂದ ತಾಲೂಕಿನ ಹಿನ್ನೀರಿನ ಏತ ನೀರಾವರಿ ಯೋಜನೆಯೂ ಒಳಗೊಂಡಿರುವುದೆ ; ಹಾಗಿಲ್ಲದಿದ್ದಲ್ಲಿ, ಭೂಮಿ ಹಾಗೂ ಮನೆಗಳನ್ನು ಕಳೆದುಕೊಂಡ ಬಿಜಾಪುರದ ಜನತೆಗೆ ಸಹಾಯನೀಡಲು ಸರ್ಕಾರದವರು ಪರಿಶೀಲಿಸುವರೆ ;

(ಈ) ಬಿಜಾಪುರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮುಳವಾಡ ಏತ ನೀರಾವರಿ ಯೋಜನೆಗೆ ಬಹಳ ಒತ್ತಾಯಿಸುತ್ತಿರುವುದು ಸರ್ಕಾರದವರಿಗೆ ತಿಳಿದಿರುವುದೆ ;

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಚುಕ್ಕಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಕೊಡಲಾದ ಉತ್ತರಗಳು

ಶ್ರೀ ಎಸ್. ಆರ್. ಬೊಮ್ಮಾಯಿ.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಪಂಡಿಸಿದ್ದೇನೆ.

ವನಮಹೋತ್ಸವದ ಅಂಗವಾಗಿ ಸರಕಾರದವರು ರಾಜ್ಯದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ

೨೨೨ ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಈ ಸಲ ವನಮಹೋತ್ಸವ ಅಂಗವಾಗಿ ಸರಕಾರದವರು ರಾಜ್ಯದಲ್ಲಿ ಕೈಗೊಂಡ ಕ್ರಮಗಳೇನು ?

ಆ) ಈ ಕಾರ್ಯಕ್ರಮಕ್ಕೆ ಸರಕಾರದವರಿಗೆ ತಗಲಿರುವ ವೆಚ್ಚವೆಷ್ಟು ?

ಇ) ಈ ಕಾರ್ಯಕ್ರಮವನ್ನು ಜಾರಿಗೆ ತರಲು ಸರಕಾರದವರು ಮಾಡಿದ ಪ್ರಯತ್ನಗಳೇನು ?

ಈ) ವನಮಹೋತ್ಸವದ ಅಂಗವಾಗಿ ಬೆಂಗಳೂರು ನಗರದಲ್ಲಿ ಸರಕಾರದವರು ಹಾಕಿಕೊಂಡ ಕಾರ್ಯಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರದವರು ಸಂತ್ಕೊಲೆ ನಂ. ಎಫ್.ಎಫ್.ಡಿ. ೧೪೪ ಎಸ್.ಟಿ.ಎಸ್. ೮೩ ದಿನಾಂಕ ೨೪-೬-೮೩ ರಂತೆ ರಾಜ್ಯದಲ್ಲಿ ದಿನಾಂಕ ೪-೭-೮೩ ರಿಂದ ೧೦-೭-೮೩ ರವರೆಗೆ ವನ ಮಹೋತ್ಸವ ಸಪ್ತಾಹವನ್ನು ಆಚರಿಸಲು ಸುತ್ಕೊಲೆ ಕೊಟ್ಟಿರುತ್ತಾರೆ. ಇದನ್ವಯ ರಾಜ್ಯದ ಎಲ್ಲಾ ಕಡೆ ವಿವಿಧ ಹಂತಗಳಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆ, ನಗರ ಮಟ್ಟ ಆಯಾಮಿತ ಉತ್ಸಾಹದಿಂದ ಆಚರಿಸಲು ಬೃಹತ್ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಆ) ರೂ. ೫,೭೦,೨೧೦-೫೫ ಪೈ.

ಇ) ರಾಜ್ಯಾದ್ಯಂತ ಹೆಚ್ಚು ಮರ ನೆಡುವ ಕಾರ್ಯಕ್ರಮಗಳನ್ನು ಎಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿಯವರು ದಿನಾಂಕ ೪-೭-೮೩ ರಿಂದ ೧೦-೭-೮೩ ರವರೆಗೆ ಕೈಗೊಂಡಿದ್ದಾರೆ ಹಾಗೂ ಇತರ ದಿನಗಳಲ್ಲಿ ಸ್ಥಳೀಯವಾಗಿ ಮಳೆ ಆಧಾರಿಸಿ ಮರ ನೆಡುವ ಕಾರ್ಯಕ್ರಮವನ್ನು ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ರಾಲಿ, ಕಾಲೇಜುಗಳು, ಸಾರ್ವಜನಿಕ ಸಂಸ್ಥೆಗಳು, ಸಾರ್ವಜನಿಕ ಕೈಗಾರಿಕೆಗಳು ಸ್ವಯಂ ಸೇವಾ ಸಂಸ್ಥೆಗಳವರು ಭಾಗವಹಿಸಿದ್ದಾರೆ. ಮರ ನೆಡುವ ಕಾರ್ಯಕ್ರಮದಲ್ಲಿ ಮಂತ್ರಿಗಳು, ಶಾಸಕರು, ಲೋಕಸಭಾ ಸದಸ್ಯರು ತಾಲ್ಲೂಕು ಬೋರ್ಡ್ ಸದಸ್ಯರು ಮತ್ತು ಪಂಚಾಯಿತಿ ಸದಸ್ಯರನ್ನೊಳಗೊಂಡು ಸಂಭ್ರಮವಾಗಿ ವನಮಹೋತ್ಸವವನ್ನು ಆಚರಿಸಲಾಗಿದೆ. ಇದೂ ಅಲ್ಲದೆ